# IV Semester B.Com. Examination, May/June 2013
# (Repeaters) (Prior to 2010-11 Scheme)
# KANNADA LANGUAGE – IV
## ವ್ಯಾವಹಾರಿಕ ಕನ್ನಡ ಮತ್ತು ಬೊಳುವಾರು ಮಹಮದ್ ಕುಂಞ ಕಥೆಗಳು

Time : 3 Hours Max. Marks : 90

I. ಕೆಳಗಿನ ಗದ್ಯಭಾಗವನ್ನು ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ಕೊಡಿ : **(1×10=10)**

ಆತ್ಮಸಂಪತ್ತು ಹೇಗೆ ಯಮ ನಿಯಮ ಪ್ರತ್ಯಾಹಾರ ಪ್ರಾಣಾಯಾಮಾದಿಗಳಿಂದ ಬೆಳೆಯುತ್ತದೆಯೋ ಹಾಗೆಯೇ ಹಣದಿಂದಲೂ ಬೆಳೆಯುತ್ತದೆ. ಇದಕ್ಕೆ ಉದಾಹರಣೆಯಾಗಿ ರಾಮಕೃಷ್ಣ ಪರಮಹಂಸರು ಹೇಳಿದ ಈ ಕತೆ ತೆಗೆದುಕೊಳ್ಳಿ. ಒಬ್ಬ ಹಠಯೋಗಿ ತನ್ನ ಯೋಗಶಕ್ತಿಯನ್ನು ತೋರಿಸಬೇಕೆಂದು ನೀರಿನ ಮೇಲೆ ಇಲ್ಲಿಂದ ಅಲ್ಲಿಗೆ ನಡೆದುಕೊಂಡು ಬಂದನಂತೆ. ರಾಮಕೃಷ್ಣರು ಅಲ್ಲಿದ್ದ ಅಂಬಿಗನಿಗೆ ಮೂರು ಕಾಸು ಕೊಟ್ಟು ಆ ಯೋಗಿ ನಡೆದು ಬಂದ ದೂರವನ್ನು ತೆಪ್ಪದಲ್ಲಿ ತೇಲಿ ಬಂದು 'ನಿನ್ನ ಯೋಗದ ಬೆಲೆ ಇಷ್ಟು' ಎಂದರಂತೆ. ಈ ಕತೆಯನ್ನು ಓದಿದ ಮೇಲಂತೂ ನನಗೆ ನಿಜವಾಗಿ ಹಣದ ಮೇಲಿನ ಗೌರವ ಹೆಚ್ಚಿದೆ. ಮೂರು ಕಾಸಿಗೆ ಇಷ್ಟು ಯೋಗಶಕ್ತಿ ಇರಬೇಕಾದರೆ ಸವರನ್‌ಗಳ ಯೋಗ ಬಲಮಾನವೆಷ್ಟಿರಬಹುದು ? ಅಷ್ಟೇಕೆ, ಮಗುವಿನ ಕೈಯಲ್ಲಿ ಮೂರು ಕಾಸು ಕೊಡಿ, ಅದು ಅಳು ನಿಲ್ಲಿಸುತ್ತದೋ ಇಲ್ಲವೋ ನೋಡಿ. ಅದಕ್ಕೆ ಪೂರ್ವಭಾವಿಯಾಗಿ ನೀವು ಆಡುವ ಮಾತು, ತೋರುವ ಪ್ರೇಮ, ಮಾಡುವ ಮುದ್ದು ಇವು ಎಲ್ಲಾ ಆ ಮೂರು ಕಾಸಿನ ಮುಂದೆ ನಿಷ್ಫಲ, ಮಗುವಿನ ಅಳುವನ್ನು ಕೂಡ ನಿಲ್ಲಿಸುವ ಶಕ್ತಿ ಹಣಕ್ಕಿದೆ ಎಂದ ಮೇಲೆ ಅದರ ಗುಣವನ್ನು ಇನ್ನೆಷ್ಟು ಹೊಗಳೋಣ. ಜಗತ್ತೆಂಬ ಹಲಸಿನ ಹಣ್ಣನ್ನು ಬಿಚ್ಚಿ, ಅದರ ಅಂಟು ನಮಗೆ ಅಂಟದಂತೆ ಅದರ ತೊಳೆಗಳನ್ನು ಬಿಡಿಸಿ ಸವಿಯಬೇಕೆಂಬ ನಮ್ಮಂಥವರೆಲ್ಲರಿಗೂ ಈ ಹಣದ ಜಿಡ್ಡು ಬೇಕೆ ಬೇಕು. ಅದಿದ್ದರೆ ನಾವು ಸಂಸಾರದಲ್ಲಿ ತಾವರೆ ಎಲೆಯ ಮೇಲಣ ಹನಿಯಂತೆ ನಿರ್ಲಿಪ್ತರಾಗಿ ಆತ್ಮತೇಜಸ್ಸನ್ನು ಎಲ್ಲೆಡೆಯೂ ಬೆಳಗುತ್ತಾ ಹೊಳೆಯಬಹುದು. ಇಲ್ಲದೆ ಹೋದರೆ ಜಗತ್ತೇ ಬೇಸರವಾಗುವ ಸಂಭವವುಂಟು. ಇದರಲ್ಲಿ ನಮ್ಮ ಆತ್ಮವನ್ನು ತೊಳೆದು ಶುಭ್ರವಾಗಿ ಇಡಬಲ್ಲ ವಸ್ತು ಹಣ ಒಂದೇ. ದೇಶಪ್ರೇಮ, ಪುತ್ರವಾತ್ಸಲ್ಯ, ಪತ್ನಿಪ್ರಣಯ, ಧರ್ಮಾಭಿರುಚಿ, ಕರುಣಾಪ್ರೇರಣೆ – ಇಂಥ ಎಲ್ಲ ಆಧ್ಯಾತ್ಮಿಕ ಸದ್ಗುಣಗಳನ್ನು ಹತೋಟಿಯಲ್ಲಿಟ್ಟು ಕಾಲಕಾಲಗಳಲ್ಲಿ ಅವು ಪ್ರಸ್ಫುಟ ಹಾಗೂ ಪ್ರಚ್ಛನ್ನವಾಗುವಂತೆ ಮಾಡುವ ಆತ್ಮಸಾಧನ ಹಣ. ಈ ಹಣವೊಂದಿಲ್ಲದೇ ಹೋಗಿದ್ದರೆ, ಎಷ್ಟೊಂದು ಹೋಟೇಲು ಮಾಣಿಗಳಿಗೂ, ದೋಬಿಗಳಿಗೂ, ಕ್ಷೌರಿಕರಿಗೂ, ವಿನೋದಿಗಳಿಗೂ ನಾವು ಕೃತಜ್ಞ ವಿನಮ್ರರಾಗಿರಬೇಕಾಗಿತ್ತು !

II. ಹುದ್ದೆಗಳ ಜಾಹೀರಾತಿನ ಲಕ್ಷಣಗಳನ್ನು ವಿವರಿಸಿ. ವಿದ್ಯಾಸಂಸ್ಥೆಯೊಂದು ಕನ್ನಡ ಶಿಕ್ಷಕರ ಹುದ್ದೆಗೆ ಆಹ್ವಾನಿಸುವ ಜಾಹೀರಾತನ್ನು ರಚಿಸಿ. **(1×10=10)**

**ಅಥವಾ**

ನೇಮಕಾದೇಶ ಮತ್ತು ಹಾಜರಾತಿ ವರದಿಗಳನ್ನು ಬರೆಯುವ ಸಂದರ್ಭವನ್ನು ವಿವರಿಸಿ. ಹಾಜರಾತಿಯ ಮಾದರಿಯನ್ನು ರಚಿಸಿ.

33

III. ಕೂಡು ಬಂಡವಾಳ ಸಂಸ್ಥೆಯಲ್ಲಿ ಕಾರ್ಯದರ್ಶಿಯ ಕರ್ತವ್ಯಗಳು ಯಾವುವು ? ವಿವರಿಸಿ. **(1×10=10)**

**ಅಥವಾ**

ಜಲಮಂಡಳಿಯಲ್ಲಿ ಜರುಗುವ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ ಮತ್ತು ಕಾರ್ಯಸೂಚಿಯನ್ನು ರಚಿಸಿ.

IV. ವರದಿ ಎಂದರೇನು ? ಎಷ್ಟು ಬಗೆಗಳು ? ಯಾವುದಾದರೊಂದು ವರದಿಯ ಮಾದರಿಯನ್ನು ರಚಿಸಿ. **(1×10=10)**

**ಅಥವಾ**

ವಾಣಿಜ್ಯ ಕ್ಷೇತ್ರದಲ್ಲಿ ವರದಿಗಳ ಕಾರ್ಯನಿರ್ವಹಣೆಯ ಸ್ವರೂಪವನ್ನು ವಿವರಿಸಿ.

V. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : **(4×5=20)**

1) ವಾಣಿಜ್ಯ ಜಾಹೀರಾತು
2) ಸಂದರ್ಶನ
3) ಷೇರುದಾರ
4) ನಡವಳಿಕೆ
5) ಹಾಜರಾತಿ ವರದಿ
6) ಅಧ್ಯಕ್ಷರ ಭಾಷಣ.

VI. ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(2×5=10)**

1) ಜೋಸೆಫ್ ಕಾಲು ಕಳೆದುಕೊಂಡ ಸಂದರ್ಭವನ್ನು ವಿವರಿಸಿ.
2) ಮೆಹರುನ್ನೀಸಾಳ ಭಾವನೆಗಳಲ್ಲಿ ಕಂಡು ಬರುವ ಗೊಂದಲವೇನು ?
3) 'ಅಂಕ' ಕಥೆಯ ಆಶಯವೇನು ?
4) ಬೇಬಿ ಮತ್ತು ಮುಕುಂದಣ್ಣನ ವಿವಾಹ ಪ್ರಸಂಗದ ಸ್ವಾರಸ್ಯವೇನು ?

VII. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : **(2×10=20)**

1) ಬೊಳುವಾರರ ಕತೆಗಳಲ್ಲಿ ಕಂಡು ಬರುವ ಮುಸ್ಲಿಂ ಸಂವೇದನೆಯನ್ನು ಕುರಿತು ಬರೆಯಿರಿ.
2) 'ಆಖಿರತ್' – ಈ ಕಥೆಯ ಆಶಯವೇನು ? ವಿವರಿಸಿ.
3) 'ಒಂದು ತುಂಡು ಗೋಡೆ' – ಕಥೆಯ ಸ್ವಾರಸ್ಯವನ್ನು ವಿವರಿಸಿ.
4) ಉಮ್ಮಾಬಿ, ಮುಕುಂದಣ್ಣ, ಸುಲೇಮಾನ್ ಹಾಜಿ, ಶೀನಿವಾಸ ಆಚಾರ್ಯ – ಇವರಲ್ಲಿ ಇಬ್ಬರ ಪಾತ್ರವನ್ನು ಪರಿಚಯಿಸಿ.

---